# ಸ್ಥಳ ಪರಿಶೀಲನಾ ವರದಿ

**ದಿನಾಂಕ:06-07-2022 ರಂದು ಸಂಭವಿಸಿದ ವಿದ್ಯುತ್ ಅಪಘಾತದ ಬಗ್ಗೆ.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:06-07-2022 ರಂದು ಮಧ್ಯಾಹ್ನ ಸುಮಾರು 11:30 ಗಂಟೆಯ ಸಮಯದಲ್ಲಿ ಹನಗೋಡು ಶಾಖೆಯ ಶಾಖಾಧಿಕಾರಿಗಳು ನನಗೆ ದೂರವಾಣಿ ಮುಖಾಂತರ ಕರೆಮಾಡಿ ಹನಗೋಡು ಶಾಖೆಗೆ ಸೇರಿದ ಕಾಳಬೂಚನಹಳ್ಳಿ ಗ್ರಾಮದಲ್ಲಿ ವಿದ್ಯುತ್ ಸ್ಪರ್ಶದಿಂದ ಎತ್ತು(ದನ) ಒಂದು ಮರಣ ಹೊಂದಿರುವ ಬಗ್ಗೆ ತಿಳಿಸಿದರು. ಕೂಡಲೇ ನಾನು ನಮ್ಮ ಶಾಖಾಧಿಕಾರಿಗಳೊಂದಿಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಕಾಳಬೂಚನಹಳ್ಳಿ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದ ಬಳಿ ಇರುವ 25 ಕೆ.ವಿ.ಎ ( DTC Code 143698) ಪರಿವರ್ತಕದ ಬಳಿ ಎತ್ತೊಂದು(ದನ) ಬಿದ್ದಿರುವುದು ಕಂಡುಬಂದಿರುತ್ತದೆ ಸದರಿ ಸ್ಥಳವನ್ನು ಪರಿಶೀಲಿಸಿದಾಗ ಹಾಗೂ ಸ್ಥಳೀಯರನ್ನು ವಿಚಾರಿಸಲಾಗಿ ಶ್ರೀ.ಸ್ವಾಮಿಗೌಡ ಬಿನ್ ಲೇಟ್.ರಾಮೇಗೌಡ ಕಾಳಬೂಚನಹಳ್ಳಿ ಗ್ರಾಮ ರವರು ಚೆಂಡು ಹೂ ತುಂಬಿದ ಎತ್ತಿನ ಗಾಡಿಯನ್ನು ಅವರ ಜಮೀನಿನಿಂದ ಬರುವ ಮಾರ್ಗದಲ್ಲಿರುವ 25 ಕೆ.ವಿ.ಎ ( DTC Code 143698) ಪರಿವರ್ತಕದ ಪಕ್ಕದಲ್ಲಿ ಎತ್ತಿನ ಗಾಡಿಯ ಎಡ ಭಾಗದ ಎತ್ತಿ(ದನ)ಗೆ ವಿದ್ಯುತ್ ತಗುಲಿತು ಎಂದು ತಿಳಿಸಿರುತ್ತಾರೆ. ಸದರಿ ಸ್ಥಳವನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ನಿರಂತರವಾಗಿ ಸುರಿದ ಗಾಳಿ ಮಳೆಯಿಂದಾಗಿ ಪರಿವರ್ತಕದ ಸುತ್ತ ಮುತ್ತ  ತೇವಾಂಶ ಕೂಡಿದ್ದು, ತುಂಬ ಶೀತದಿಂದ ಕಂಬವು ಸಹಾ ಬಾಗಿಕೊಂಡಿರುತ್ತದೆ ಹಾಗೂ ವಿಪರೀತ ಗಾಳಿ ಇದ್ದ ಕಾರಣ ತಟಸ್ಥ(Neutral) ಹಾಗೂ ಫೇಸ್ ವಿದ್ಯುತ್ ಮಾರ್ಗಗಳು ಒಂದಕ್ಕೊಂದು ತಾಗಿ ತಟಸ್ಥ(Neutral) ನಿಂದ ಪರಿವರ್ತಕಕ್ಕೆ ರಿರ್ಟನ್ ವಿದ್ಯುತ್ ಹರಿದು ಇದರಿಂದ ಗ್ರೌಂಡಿಂಗ್ ವೈಯಾರ್ ಮುಖಾಂತರ ವಿದ್ಯುತ್ ಪ್ರವಹಿಸಿ ಎತ್ತು(ದನ) ಮರಣ ಹೊಂದಿರುತ್ತದೆ ಎಂದು ತಿಳಿದು ಬಂದಿರುತ್ತದೆ.

# ಸ್ಥಳ ಪರಿಶೀಲನಾ ವರದಿ

**ದಿನಾಂಕ:07–07–2022 ರಂದು ಸಂಭವಿಸಿದ ವಿದ್ಯುತ್ ಅಪಘಾತದ ಬಗ್ಗೆ.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:07–07–2022 ರಂದು ಮಧ್ಯಾಹ್ನ ಸುಮಾರು 02:15 ಗಂಟೆಯ ಸಮಯದಲ್ಲಿ ಹನಗೋಡು ಶಾಖೆಯ ಶಾಖಾಧಿಕಾರಿಗಳು ನನಗೆ ದೂರವಾಣಿ ಮುಖಾಂತರ ಕರೆಮಾಡಿ ಹನಗೋಡು ಶಾಖೆಗೆ ಸೇರಿದ ಹರೀನಹಳ್ಳಿ ಗ್ರಾಮದಲ್ಲಿ ವಿದ್ಯುತ್ ಸ್ಪರ್ಶದಿಂದ ಮೇಕೆ ಒಂದು ಮರಣ ಹೊಂದಿರುವ ಬಗ್ಗೆ ತಿಳಿಸಿದರು. ಕೂಡಲೇ ನಾನು ನಮ್ಮ ಶಾಖಾಧಿಕಾರಿಗಳೊಂದಿಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಹರೀನಹಳ್ಳಿ ಗ್ರಾಮದ ಸಾವಿತ್ರಮ್ಮ ಕೋಂ ಮುದ್ದೇಗೌಡ ರವರ ಮನೆಯ ಬಳಿ ಮೇಕೆಯು ಬಿದ್ದಿರುವುದು ಕಂಡುಬಂದಿರುತ್ತದೆ. ಸದರಿ ಸ್ಥಳವನ್ನು ಪರಿಶೀಲಿಸಿದಾಗ ಸಾವಿತ್ರಮ್ಮ ಕೋಂ ಮುದ್ದೇಗೌಡ ರವರ ಮನೆಯ ಸರ್ವಿಸ್ ಮೈನ್‌ನ ಒಂದು ತುದಿಯು ತುಂಡಾಗಿ ವಿದ್ಯುತ್ ಕಂಬಕ್ಕೆ ತಾಗಿಕೊಂಡಿರುತ್ತದೆ. ನಿರಂತರವಾಗಿ ಸುರಿದ ಮಳೆಯಿಂದಾಗಿ ಕಂಬ ಹಾಗೂ ಕಂಬದ ಸುತ್ತ ಮುತ್ತ ಪ್ರದೇಶವು ತುಂಬ ತೇವಾಂಶ ಕೂಡಿರುತ್ತದೆ ಸದರಿ ಕಂಬವು ಆರ್.ಸಿ.ಸಿ ಕಂಬವಾದ್ದರಿಂದ Neutral ನಿಂದ ಕಂಬಕ್ಕೆ ವಿದ್ಯುತ್ ಪ್ರವಹಿಸಿದ್ದು, ಈ ವೇಳೆಯಲ್ಲಿ ಕಂಬದ ಬಳಿ ಸೋಮಯ್ಯ ಬಿನ್ ಲೇಟ್. ದ್ಯಾವಯ್ಯ ಎಂಬುವವರಿಗೆ ಸೇರಿದ ಮೇಕೆ(ಆಡು) ಯು ಕಂಬಕ್ಕೆ ಸ್ಪರ್ಶಿಸಿದಾಗ ವಿದ್ಯುತ್ ಶಾಕ್ ನಿಂದಾಗಿ ಮೇಕೆ(ಆಡು) ಮರಣ ಹೊಂದಿರುತ್ತದೆ ಎಂದು ತಿಳಿದು ಬಂದಿರುತ್ತದೆ.